# ಶ್ರಾವಣ ಕದಿರು



ಅಲ್ಪಾಯುಷಿಯಾಗಿರುವ ಈ ಸಸ್ಯಕ್ಕೆ ಶ್ರಾವಣಮಾಸದಲ್ಲಿ ವಿಶೇಷ ಸ್ಥಾನ ಇದೆ. ಮನೆಗಳಲ್ಲಿ ಅರಳುವ ರಂಗೋಲಿಗಳ ಮೇಲೆ ಈ ಗಿಡ ಇಟ್ಟು ಶೃಂಗಾರ ಮಾಡಲಾಗುತ್ತದೆ.

★ ಚಿತ್ರ- ಬರಹ: ಪ್ರಮೋದ ಹರಿಕಾಂತ

ಶ್ರಾವಣ ಕದಿರು ಮಳೆಗಾಲದ ಅತಿಥಿ. ಆಷಾಡ ಮುಗಿದು ಶ್ರಾವಣ ಮಾಸದ ಹೊಸ್ತಿಲಲ್ಲಿ ಚಿಗುರೊಡೆಯುವುದರಿಂದ ಈ ಹೆಸರು. ಇದರ ಕಾಂಡ ಹಾಗೂ ಎಲೆಗಳ ತೊಟ್ಟುಗಳು ಕಪ್ಪಗಿರುವುದರಿಂದ ಕಾಗೆಕಾಲು ಗಿಡ ಎಂದೂ ಕರೆಯುತ್ತಾರೆ.

ಮುಂಗಾರಿನ ಅಪ್ಪುಗೆಗೆ ಇಳೆ ತಂಪಾಗುತ್ತಿದ್ದಂತೆಯೇ ಬಾವಿ ಕಟ್ಟೆ, ಕಂಪೌಂಡ್ ಗೋಡೆಗಳ ಪಾರ್ಶ್ವಭಾಗದಲ್ಲಿ ಶ್ರಾವಣ ಕದಿರು ಬೆಳೆಯುತ್ತವೆ. ಮಳೆಗಾಲ ಮುಗಿಯುತ್ತಿದ್ದಂತೆಯೇ ಒಣಗಿ ಹೋಗುತ್ತದೆ. ತಂಪು ಹವಾಗುಣದಲ್ಲಿ ಮಾತ್ರ ಬೆಳೆಯುವ ಈ ಸಸ್ಯವನ್ನು ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಹೆಚ್ಚಾಗಿ ಕಾಣಬಹುದು.

ಅಲ್ಪಾಯುಷಿಯಾಗಿರುವ ಈ ಸಸ್ಯಕ್ಕೆ ಶ್ರಾವಣಮಾಸದಲ್ಲಿ ವಿಶೇಷ ಸ್ಥಾನ ಇದೆ. ಮನೆಗಳಲ್ಲಿ ಅರಳುವ ರಂಗೋಲಿಗಳ ಮೇಲೆ ಈ ಗಿಡ ಇಟ್ಟು ಶೃಂಗಾರ ಮಾಡಲಾಗುತ್ತದೆ. ಕರಾವಳಿಯಲ್ಲಿ ನಡೆಯುವ ಹೊಸ್ತ (ಗದ್ದೆ ಪೂಜೆ) ಹಾಗೂ ಬ್ರಾಹ್ಮಣರ ಬಾಗಿಲು ಪೂಜೆಯಲ್ಲಿ ಶ್ರಾವಣ ಕದಿರು ಬಲು ಶ್ರೇಷ್ಠ. ಹಾಲಕ್ಕಿ ಒಕ್ಕಲ ಸಮುದಾಯದವರು ದೇವರ ಪೂಜೆಗೂ ಈ ಗಿಡವನ್ನು ಬಳಸುತ್ತಾರೆ.

**ನಂಜಿಗೆ ಔಷಧ**

ಮಳೆಗಾಲದಲ್ಲಿ ಕಾಲಿನ ಬೆರಳಿನ ಸಂದಿಯಲ್ಲಿ ಆಗುವ ನಂಜು ಗಾಯಕ್ಕೆ ಶ್ರಾವಣ ಕದಿರು ಉತ್ತಮ ಔಷಧ. ಇದರ ಎಲೆಯನ್ನು ಜಜ್ಜಿ, ಅದಕ್ಕೆ ಅರಿಶಿಣ, ಉಪ್ಪು ಮಿಶ್ರಣ ಮಾಡಿ ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ರಾತ್ರಿ ಮಲಗುವಾಗ ಗಾಯಕ್ಕೆ ಲೇಪಿಸಿದರೆ, ಶೀಘ್ರದಲ್ಲಿ ಗಾಯ ವಾಸಿಯಾಗುತ್ತದೆ. ಹಳ್ಳಿಗಳಲ್ಲಿ ಗದ್ದೆ, ತೋಟದ ಕೆಲಸಕ್ಕೆ ಹೋಗುವವರಿಗೆ ಇದೇ ಮನೆ ಔಷಧ.

ಈ ಸಸ್ಯ ಎಡಿಯಾಂಟಮ್ (ಝರಿ ಸಸ್ಯ) ಪ್ರಭೇದಕ್ಕೆ ಸೇರಿದ್ದು, ಟೆರಿಡೋಪೈಟ್ಸ್ ಗುಂಪಿನಲ್ಲಿ ಬರುತ್ತದೆ. ಗರಿಷ್ಠ 12 ಇಂಚು ಉದ್ದದವರೆಗೆ ಬೆಳೆಯುತ್ತದೆ. ಕಾಂಡದ ಬುಡದಿಂದ ತುದಿವರೆಗೆ ಎಲೆಗಳು ಕ್ರಮೇಣ ಗಾತ್ರದಲ್ಲಿ ಚಿಕ್ಕದಾಗುತ್ತ ಇಡೀ ಸಸ್ಯವೇ ಮಾವಿನೆಲೆ ಆಕಾರದಲ್ಲಿ ಬೆಳೆಯುವುದರಿಂದ ಕುತೂಹಲ ಹುಟ್ಟಿಸುತ್ತದೆ. ಚಿಕ್ಕ ಎಲೆಗಳು ಸುರುಳಿ ಆಕಾರದಲ್ಲಿ ಇರುವುದು ಇದರ ವಿಶೇಷ.

ಶಾಲೆಗೆ ಹೋಗುವ ಮಕ್ಕಳು ಈ ಸಸ್ಯವನ್ನು ಪುಸ್ತಕದಲ್ಲಿ ಇಟ್ಟುಕೊಂಡಿರುತ್ತಾರೆ. ಹೀಗೆ ಇಡುವುದರಿಂದ ಸಸ್ಯದ ಬಣ್ಣದಲ್ಲಿ ಯಾವ ವ್ಯತ್ಯಾಸವೂ ಆಗದೇ ಇದ್ದ ಸ್ಥಿತಿಯಲ್ಲಿಯೇ ಒಣಗುತ್ತದೆ. ನಂತರ ಅದನ್ನು ಬೇಕಾದ ರೀತಿಯಲ್ಲಿ ಹಾಳೆಯ ಮೇಲೆ ಅಂಟಿಸಿ ಚಿತ್ರ ರಚಿಸಬಹುದು. ಇಂತಹ ಚಿತ್ರ ನೋಡಲು ತುಂಬಾ ಸುಂದರವಾಗಿರುತ್ತದೆ.

ಇತ್ತೀಚೆಗೆ ಈ ಸಸ್ಯದ ಸೌಂದರ್ಯಕ್ಕೆ ಮಾರುಕಟ್ಟೆಯಲ್ಲಿಯೂ ಮಹತ್ವ ಬಂದಿದೆ. ಪುಷ್ಪಗುಚ್ಛ ಹಾಗೂ ಇತರ ಸೌಂದರ್ಯ ವಸ್ತುಗಳ ತಯಾರಿಕೆಯಲ್ಲಿ ಶ್ರಾವಣ ಕದಿರನ್ನು ಬಳಸಲಾಗುತ್ತಿದೆ. ಕೆಲವು ಕಡೆ ಕೃತಕ ವಾತಾವರಣ ಸೃಷ್ಟಿಸಿಯೂ ಈ ಗಿಡವನ್ನು ಬೆಳೆಯಲಾಗುತ್ತದೆ ಎನ್ನುತ್ತಾರೆ ಸಸ್ಯಶಾಸ್ತ್ರ ಉಪನ್ಯಾಸಕ ಪ್ರೊ. ಶಿವಾನಂದ ಭಟ್.

